## ಮಾತು-ಕತೆ

1985ರಲ್ಲಿ ನಾನು ವಿಮಾನ ಕಾರ್ಖಾನೆಯನ್ನು ಸೇರಿಕೊಂಡಾಗ, ನಮ್ಮೆದುರು ಭಾರತದ ಮೊಟ್ಟ ಮೊದಲ ದೇಶೀಯ ವಿನ್ಯಾಸದ ಮಲ್ಟಿ ರೋಲ್ ಮಲ್ಟಿ ಮಿಷನ್ ಹೆಲಿಕಾಪ್ಟರ್‌ನ ಪ್ರಾಜೆಕ್ಟ್ ಇತ್ತು. ಆ ಹೆಲಿಕಾಪ್ಟರ್ ಸಂಶೋಧನೆ ಮತ್ತು ವಿನ್ಯಾಸದಲ್ಲಿ ತೊಡಗಿದ್ದ ನನ್ನ ಒಂದು ವಿಶೇಷ ಅನುಭವವನ್ನು ಹಂಚಿಕೊಳ್ಳಲು ಇಚ್ಛಿಸುತ್ತೇನೆ.

ನನ್ನ 'ಗಂಡು' ಹೆಸರಿನಿಂದ ಒಂದಿಷ್ಟು ಲಾಭವೂ ಇದೆ! ಎರಡು ದಶಕಕ್ಕೂ ಹಿಂದಿನ ಘಟನೆ. ಚೇತಕ್ ಹೆಲಿಕಾಪ್ಟರಿನಲ್ಲಿ ದೇಶೀಯ ವಿನ್ಯಾಸದ ಟಾರ್ಪಿಡೋ ಅನ್ನು ಇಂಟಿಗ್ರೇಟ್ ಮಾಡುವ ಪ್ರಾಜೆಕ್ಟ್ ಅದಾಗಿತ್ತು. ಟಾರ್ಪಿಡೋ ಎಂಬುದು ಯುದ್ಧದಲ್ಲಿ ಜಲಾಂತರ್ಗಾಮಿಗಳ (ಸಬ್‌ಮೆರಿನ್) ವಿರುದ್ಧ ಬಳಸುವ ಅಸ್ತ್ರ. ಇದಕ್ಕೆ ಬೇಕಾದ ಆರ್ಮಿಂಗ್ ಮತ್ತು ಫೈರಿಂಗ್ ಸರ್ಕ್ಯೂಟ್‌ಗಳನ್ನು ವಿನ್ಯಾಸ ಮಾಡಿ ಪ್ರಾಜೆಕ್ಟ್‌ನ ಮುಖ್ಯ ಜವಾಬ್ದಾರಿಯನ್ನು ಹೊತ್ತಿದ್ದೆ. ಇದೀಗ ಅಸ್ತ್ರವನ್ನು ಪರೀಕ್ಷೆ ಮಾಡಲು, ಮುಂಬೈನಿಂದ ಯುದ್ಧದ ಹಡಗಿನಲ್ಲಿ ಹೊರಟು ಹಗಲೂ ರಾತ್ರಿ ಅರಬ್ಬೀ ಸಮುದ್ರದಲ್ಲಿ ಪಯಣ ಮಾಡಿ, ಗೊತ್ತಾದ ತಾಣಕ್ಕೆ ತಲುಪಬೇಕಿತ್ತು. ಯುದ್ಧದ ಹಡಗನ್ನು ನಾನು ಏರಿದಂತೆ, ಅಲ್ಲಿಯ ನಾವಿಕರು ಸಾಲಾಗಿ ನಿಂತು ಶಿಸ್ತಿನಿಂದ ನನಗೆ ಸಲ್ಯೂಟ್ ಮಾಡಿದಾಗ ನಾನು ಕಕ್ಕಾಬಿಕ್ಕಿಯಾಗಿದ್ದೆ. ಯಾರೋ 'ಕ್ಯಾಪ್ಟನ್ಸ್ ವೈಫ್' ಎಂದು ಪಿಸುಗುಟ್ಟಿದ್ದು ಕೇಳಿ 'ಇಲ್ಲ ಇಲ್ಲ, ನಾನು ವಿಮಾನ ಕಾರ್ಖಾನೆಯಿಂದ ಬಂದಿರುವ ಎಂಜಿನಿಯರ್...' ಎಂದು ವಿವರಿಸಿದ್ದೆ. ತಕ್ಷಣ ನನ್ನನ್ನು ತಡೆದು 'ಮಹಿಳೆಯರಿಗೆ ಯುದ್ಧದ ಹಡಗಿನಲ್ಲಿ ಪ್ರವೇಶವಿಲ್ಲ' ಎಂದರು. ಹಡಗು ಲಂಗರು ಹಾಕಿರುವಾಗ, ಹಿರಿಯ ಅಧಿಕಾರಿಗಳ ಕುಟುಂಬಕ್ಕೆ ಒಳಗೆ ಹೋಗಿ ನೋಡುವ ಅವಕಾಶ ಇದೆ. ಆದರೆ ಇಲ್ಲಿ ನಾನು ಹಗಲು ರಾತ್ರಿ ಹಡಗಿನಲ್ಲಿ ಪಯಣಿಸಬೇಕಿತ್ತು. ನನಗಾಗಲೇ ನೌಕಾಪಡೆಯ ದಿಲ್ಲಿಯ ಹೆಡ್ ಕ್ವಾರ್ಟರ್ಸ್‌ನಿಂದ ಅನುಮತಿ ದೊರೆತಿತ್ತು. ನಾನು ಅದನ್ನು ಹೇಳಿದಾಗ ತಿಳಿಯಿತು, 'ನೇಮಿಚಂದ್ರ' ಹೆಸರನ್ನು ಬಹುಶಃ ಅವರು ಗಂಡಸು ಎಂದು ತಿಳಿದು ಅನುಮತಿ ಕೊಟ್ಟಿದ್ದರು. ಆದರೆ ಈಗ 'ಈ ಯುದ್ಧ ವಿಮಾನದಲ್ಲಿ ಮಹಿಳೆಯರು ರಾತ್ರಿ ಕಳೆಯಲು ಯಾವ ಅನುಕೂಲಗಳೂ ಇಲ್ಲ. ಮಹಿಳೆಯನ್ನು ಕರೆದೊಯ್ಯಲು ಅನುಮತಿ ಇಲ್ಲ' ಎಂದು ನನ್ನನ್ನು ತಡೆದಿದ್ದರು. ಆದರೆ, ಅಸ್ತ್ರ ಪರೀಕ್ಷೆಗೆ ಆ ವಿಷಯದ ತಜ್ಞಳಾದ ನನ್ನನ್ನು ಕರೆದೊಯ್ಯುವುದೂ ಅನಿವಾರ್ಯವಿತ್ತು. ಕಡೆಗೂ ಮೂರ್ನಾಲ್ಕು ಗಂಟೆಗಳ ನಂತರ ದಿಲ್ಲಿಗೆ 'ಸಿಗ್ನಲ್' ಹೋಗಿ, ಮರು ಅನುಮತಿ ಪಡೆದು, ನನಗೆ ಯುದ್ಧದ ಹಡಗಿನಲ್ಲಿ ಪ್ರವೇಶ ಸಿಕ್ಕಿತು. ಅಂದಹಾಗೆ, ಹಡಗಿನಲ್ಲಿ ಅಧಿಕಾರಿಗಳ ಬೋರ್ಡ್ ರೂಮ್‌ಗೆ ಹೋದಾಗ, ಅಲ್ಲೊಂದು ಪೋಸ್ಟರ್ ಕಂಡಿತು. ಅದರಲ್ಲಿ ಏನು ಬರೆದಿತ್ತು ಗೊತ್ತೆ?

**'Why is a ship called a she? Oh there is always a lot of bustle around her, and a lot of men. It takes a fortune to keep her looking good. She is absolutely uncontrollable without a man at the helm.'**

ಎಂತಹ ಮೇಲ್ ಚಾವನಿಸ್ಟಿಕ್ ಪೋಸ್ಟರ್ ಎಂದು ಒಳಗೇ ಕುದಿದಿದ್ದೆ. ಆದರೆ ನಮ್ಮ ಯೋಧರು

◆ ನಿಮ್ಮ ಬರವಣಿಗೆಯ ಕ್ರಮ ಹೇಗೆ? ಒಂದು ಕತೆ ಹೇಗೆ ರೂಪು ತಳೆಯುತ್ತದೆ?

ಕತೆ ಬರೆಯಲು ಹೊರಟಾಗ ಅದರ ಪೂರ್ಣ ಚಿತ್ರ ನನಗೇ ತಿಳಿದಿರುವುದಿಲ್ಲ. ಮಬ್ಬಾಗಿ ಕಥಾಹಂದರವೊಂದು ಮನಸ್ಸಲ್ಲಿ ರೂಪುಗೊಳ್ಳುತ್ತದೆ. ಸಮಯ ಸರಿದಂತೆ ಅದಕ್ಕೆ ಪೂರಕವಾದ ಘಟನೆಗಳು, ವಿಚಾರಗಳು ಸಿಗುತ್ತವೆ. ಅಗತ್ಯವಾದ ಅಧ್ಯಯನವನ್ನು ಕೈಗೊಂಡಿರುತ್ತೇನೆ. ಬರೆಯುತ್ತಾ ಬರೆಯುತ್ತಾ ಒಂದು 'ಪಜಲ್'ನ ಒಂದೊಂದೇ ತುಂಡುಗಳು ಜೊತೆಗೂಡಿ ಒಟ್ಟು ಚಿತ್ರ ಮೂಡಿ ನನಗೇ ಅನೇಕ ಬಾರಿ ಅಚ್ಚರಿಯಾಗಿಬಿಡುತ್ತದೆ.